


## ಮಕ್ಕಳನ್ನು ಬಾಧಿಸುವ ಆಸ್ಪತ್ರೆಗಳ ಸೋಂಕು!

ಆಸ್ಪತ್ರೆಗಳು ರೋಗಗಳ ಸೋಂಕನ್ನು ಹರಡುವ ಕೇಂದ್ರಗಳಾಗಿವೆ ಎಂಬ ಆತಂಕದ ಸಂಗತಿಯನ್ನು ಬ್ರಿಟಿಷ್ ಸಂಶೋಧಕರು ಪತ್ತೆಹಚ್ಚಿದ್ದಾರೆ. ಹತ್ತು ಮಕ್ಕಳಲ್ಲಿ ಒಂದು ಮಗು ಆಸ್ಪತ್ರೆಯ ಸೋಂಕಿಗೆ ತುತ್ತಾಗುತ್ತಿದೆ ಎಂಬುದು ಅವರ ಪರೀಕ್ಷೆಯಿಂದ ತಿಳಿದು ಬಂದಿದೆ.

ಆಸ್ಪತ್ರೆಗಳ ನಿರ್ವಹಣೆಯಲ್ಲಿನ ದೋಷದಿಂದ ಹಲವಾರು ಮಕ್ಕಳು ಉಸಿರಾಟಕ್ಕೆ ಸಂಬಂಧಿಸಿದ ರೋಗಗಳಿಗೆ ಸುಲಭವಾಗಿ ತುತ್ತಾಗುತ್ತಿದ್ದಾರೆ. ಆಸ್ಪತ್ರೆಯ ತ್ಯಾಜ್ಯದ ಸಮರ್ಪಕ ನಿರ್ವಹಣೆಯಿಂದ ಮಾತ್ರ ಇದನ್ನು ತಡೆಯಬಹುದು ಎಂದು ತಿಳಿಸಿರುವ ಅವರು, ನೂರು ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವ 50 ಸಾವಿರ ರೋಗಿಗಳನ್ನು ಪರೀಕ್ಷಿಸಿದ್ದರು.

## ಮಕ್ಕಳಲ್ಲಿ ತಬ್ಬಲಿ ಭಾವ!

ಪೋಷಕರು ತಮ್ಮ ಮಕ್ಕಳ ಎದುರು ಐ ಪಾಡ್, ಮೊಬೈಲ್ ಹಾಗೂ ಕಂಪ್ಯೂಟರ್‌ಗಳನ್ನು ಹೆಚ್ಚು ಬಳಸುತ್ತಿದ್ದರೆ, ತಾವು ಪೋಷಕರಿಂದ ಅಲಕ್ಷ್ಯಕ್ಕೆ ಒಳಗಾಗುತ್ತಿದ್ದೇವೆ ಎಂಬ ಗೀಳು ಮಕ್ಕಳಲ್ಲಿ ಬೆಳೆಯುತ್ತದೆ ಎಂದು ಲಂಡನ್ ಮನೋತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಇಂತಹ ತಬ್ಬಲಿ ಭಾವ ಜಾಸ್ತಿ ಟೀವಿ ನೋಡುವ ಹಾಗೂ ಮದ್ಯಪಾನವನ್ನು ಚಟ ಮಾಡಿಕೊಂಡಿರುವ ಪೋಷಕರ ಮಕ್ಕಳಲ್ಲಿಯೂ ಉಂಟಾಗುತ್ತದೆ. ಈ ರೀತಿಯ ಋಣಾತ್ಮಕ ಭಾವನೆ ಮಕ್ಕಳಲ್ಲಿ ದೀರ್ಘಕಾಲ ನೆಲೆಸದಂತೆ ನೋಡಿಕೊಳ್ಳಬೇಕು. ಕೆಲಸದ ಒತ್ತಡ ಎಷ್ಟೇ ಇದ್ದರೂ ಮನೆಗೆ ಬಂದ ತಕ್ಷಣ ತಮ್ಮ ಉಪಕರಣಗಳ ಹೊರತಾಗಿ ಒಂದಿಷ್ಟು ಹೊತ್ತು ಮಕ್ಕಳ ಬೇಕು– ಬೇಡಗಳನ್ನು ಆಲಿಸಬೇಕು, ಅವರ ಜೊತೆ ಆಟ ಆಡಬೇಕು ಎಂದು ಅವರು ಸಲಹೆ ನೀಡಿದ್ದಾರೆ. ಹೀಗೆ ಮಾಡುವುದರಿಂದ ಮಕ್ಕಳ ಗೀಳನ್ನು ದೂರ ಮಾಡಬಹುದು.

ಹೆಲ್ತ್ ಪ್ಲಸ್

## ಜಾಹೀರಾತಿನ ವಂಚನೆ!

ದಾಳಿಂಬೆ ರಸ ಹೃದಯ ರೋಗಕ್ಕೆ ರಾಮಬಾಣ ಎಂಬ ಜಾಹೀರಾತು ಅವೈಜ್ಞಾನಿಕ ಎಂದು ಅಮೆರಿಕಾದ ನ್ಯಾಯಾಲಯ ಹೇಳಿದೆ. ದಾಳಿಂಬೆಯ ರಸವನ್ನು ಸಂಸ್ಕರಿಸಿ ಮಾರುವ ಕಂಪೆನಿಯೊಂದು ಕ್ಯಾನ್ಸರ್ ಹಾಗೂ ಹೃದಯ ರೋಗಿಗಳಿಗೆ ಉತ್ತಮ ಔಷಧ ಎಂದು ಜಾಹೀರಾತು ನೀಡುವ ಮೂಲಕ ಜನತೆಯನ್ನು ವಂಚಿಸುತ್ತಿದೆ ಎಂದೂ ಅದು ಹೇಳಿದೆ.

ಔಷಧಿಯ ಗುಣ ಹಾಗೂ ಅದರ ಕಾರ್ಯಕ್ಷಮತೆ ವೈಜ್ಞಾನಿಕವಾಗಿ ಸಾಬೀತಾಗದ ಹೊರತು ಆರೋಗ್ಯ ಸಂಬಂಧಿ ಜಾಹೀರಾತುಗಳಲ್ಲಿ ವಿಶ್ವಾಸಾರ್ಹತೆಯನ್ನು ಬಿಂಬಿಸುವ ಹೇಳಿಕೆಯನ್ನು ನೀಡುವುದು ಕಾನೂನು ಬಾಹಿರ ಎಂದು ಅದು ಅಭಿಪ್ರಾಯಪಟ್ಟಿದೆ.

## ಹೆಚ್ಚು ಕ್ಯಾಲ್ಸಿಯಂ ಮಾತ್ರೆ ಒಳ್ಳೆಯದಲ್ಲ!

ಕ್ಯಾಲ್ಸಿಯಂ ದೇಹಕ್ಕೆ ಅವಶ್ಯ. ಅದು ನಾವು ಸೇವಿಸುವ ಆಹಾರದಲ್ಲಿಯೇ ಸಿಗುತ್ತದೆ. ಇದು ಮೂಳೆಗಳಿಗೆ ಶಕ್ತಿಯನ್ನು ನೀಡುತ್ತದೆ. ಈ ಕಾರಣಕ್ಕಾಗಿ ಗರ್ಭಿಣಿಯರಿಗೆ– ದೈಹಿಕವಾಗಿ ಸೊರಗಿದ ವ್ಯಕ್ತಿಗಳಿಗೆ ವೈದ್ಯರು ಹೆಚ್ಚುವರಿಯಾಗಿ 'ಕ್ಯಾಲ್ಸಿಯಂ' ಅವಶ್ಯ ಎಂದು ಕ್ಯಾಲ್ಸಿಯಂ ಅಂಶವುಳ್ಳ ಮಾತ್ರೆಗಳನ್ನು ನೀಡುತ್ತಾರೆ. ವೈದ್ಯರು ಹೀಗೆ ನೀಡುವ ಕ್ಯಾಲ್ಸಿಯಂ ಮಾತ್ರೆಗಳು ಹೃದಯಕ್ಕೆ ತೊಂದರೆಯನ್ನು ಉಂಟುಮಾಡುತ್ತವೆ ಎಂದು ನೂತನ ಅಧ್ಯಯನ ಹೇಳಿದೆ.

ಮೂಳೆ– ಹಾಗೂ ಕೀಲು ಸವೆತಕ್ಕೆ ವೈದ್ಯರು ಕ್ಯಾಲ್ಸಿಯಂ ಮಾತ್ರೆಗಳನ್ನು ನೀಡುತ್ತಾರೆ. ನಿತ್ಯವೂ ಅದನ್ನು ಸೇವಿಸುವುದರಿಂದ ಮತ್ತೊಂದು ರೀತಿಯ ತೊಂದರೆಯನ್ನು ಅನುಭವಿಸಬೇಕಾಗುತ್ತದೆ ಎಂದು ಅದು ಹೇಳಿದೆ.

– ಟಿಪ್ಸ್